**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| ಅಮಲಜಾರಿ ಸಂಖ್ಯೆ | **06/2023** |
|---|---|
| **ಪಿ.ಡಬ್ಲ್ಯೂ** | **1** |
| **ದಿನಾಂಕ :-** | **27.01.2026** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಡಿಕ್ರಿದಾರರ ಪರ ಶ್ರೀ. ಬಿ.ಆರ್.ಸಿ. ವಕೀಲರಿಂದ**

ನಾನು ಪಿಯುಸಿ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ನನ್ನ ತಂದೆಯ ಹೆಸರು ರಾಮದಾಸ್. ನಮ್ಮ ತಂದೆಯವರಿಗೆ ಎಂಟು ಜನ ಮಕ್ಕಳು. ಅವರ ಹೆಸರು, ಭಾಗ್ಯಲಕ್ಷ್ಮಮ್ಮ, ರಮೇಶ್, ಯಮುನಾ, ಪಾರ್ವತಿ, ಪ್ರೇಮ ಕುಮಾರಿ, ಹರಿಣಾಕ್ಷಿ, ವೀಣಾ ಮತ್ತು ಮೋಹನ್ ಕುಮಾರ್. ನಮ್ಮ ತಂದೆಯವರು 2018 ರಲ್ಲಿ ಮೃತಪಟ್ಟಿರುತ್ತಾರೆ. ಆನೇಕಲ್ ನ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದ ಒ.ಎಸ್.ನಂ.901/2016 ರ ಸಂಪೂರ್ಣ ಮಾಹಿತಿ ನನಗೆ ಇಲ್ಲ. ಮಿಸ್ ಸಂಖ್ಯೆ.33/2020 ರ ಬಗ್ಗೆ ಮಾಹಿತಿ ಇದೆ. ಆ ಮಿಸ್ ಸಂಖ್ಯೆಃ33/2020 ಅನ್ನು ನಮ್ಮ ತಂದೆಯವರಿಗೆ ತಿಳಿಯದೆ ನಮ್ಮ ಆಸ್ತಿ ಬೇರೆಯವರು ಮಾಡಿಕೊಂಡಿದ್ದ ಕಾರಣ ನಾವು ಹಾಕಿರುತ್ತೇವೆ. ಒ.ಎಸ್.ನಂ.901/2016 ರಲ್ಲಿ ನಮ್ಮ ತಂದೆಯವರು ಪಕ್ಷಗಾರರಾಗಿದ್ದರು ಎಂದರೆ ಸಾಕ್ಷಿ ಆಗ ಅವರು ಅನಾರೋಗ್ಯದ ಕಾರಣ ಓಡಾಡಲು ಸಾಧ್ಯವಾಗುತ್ತಿರಲಿಲ್ಲ. ಆ ಬಗ್ಗೆ ನಾವು ಸದರಿ ಅರ್ಜಿಯಲ್ಲಿ ಹೇಳಿರುತ್ತೇವೆ. ಸದರಿ ಅರ್ಜಿ ವಿಚಾರಣಾ ಹಂತದಲ್ಲಿ ಇದೆ. ಬನ್ನೇರುಘಟ್ಟ ಗ್ರಾಮದ ಸರ್ವೆ ನಂಬರ್-16/2, 18/2 ಹಾಗೂ 11 ಆಸ್ತಿಗಳು ಮೂಲ ವಾರಸುದಾರರು ಯಾರೆಂದರೆ ನಮ್ಮ ತಂದೆಯೇ ಆಸ್ತಿಗಳು ಎಂದು ನುಡಿದಿರುತ್ತಾರೆ. ನಮ್ಮ ಮೂಲ ಬನ್ನೇರುಘಟ್ಟ ಗ್ರಾಮ. ಚಂಪಕಾಧಾಮ ಎಂಬುವವರು ನನಗೆ ಪರಿಚಯಸ್ಥರು. ಅವರ ಊರು ಬನ್ನೇರುಘಟ್ಟ. ಅವರ ಹಾಗೂ ಅವರ ಕುಟುಂಬದ ಬಗ್ಗೆ ನನಗೆ ಅಷ್ಟು ಮಾಹಿತಿ ಇಲ್ಲ. ಶಾರದಮ್ಮ ಎಂಬುವವರು ನನ್ನ ತಾಯಿ. ನನ್ನ ತಾಯಿಯ ಊರು ಕುಣಿಗಲ್.

ಬನ್ನೇರುಘಟ್ಟ ಗ್ರಾಮದ ಸರ್ವೆ ನಂಬರ್-16/2, 18/2 ಹಾಗೂ 11 ಆಸ್ತಿಗಳು ಮೂಲ ಮುನಿವೆಂಕಟಪ್ಪನವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಒ.ಎಸ್.ಸಂಖ್ಯೆಃ 706/1950 ಎಂದು ಮುನಿವೆಂಕಟಪ್ಪ ನವರು ಶಾರದಮ್ಮ(ಸಾಕ್ಷಿಯ ತಾಯಿ ಆಗಿರುವುದಿಲ್ಲ ಹಾಗೂ ಅವರು ಬೇರೆ ಶಾರದಮ್ಮ ಎಂದು ತಿಳಿಸಿರುತ್ತಾರೆ) ಎಂಬುವವರ ಮೇಲೆ ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬನ್ನೇರುಘಟ್ಟ ಗ್ರಾಮದ ಸರ್ವೆ ನಂಬರ್-16/2, 18/2 ಹಾಗೂ 11 ಆಸ್ತಿಗಳು ಮುನಿವೆಂಕಟಪ್ಪ ನವರು ಸದರಿ ಶಾರದಮ್ಮ ನವರಿಗೆ ಅಡಮಾನ ಮಾಡಿದ್ದರು, ಆ

ವಿಚಾರವಾಗಿ ಆ ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಅಡಮಾನ ವಜಾ ಆಗಿದೆ ಎಂದು ನನಗೆ ಗೊತ್ತಿಲ್ಲ.

ಚಿಲಕಮ್ಮ ಎಂಬುವವರು ನನಗೆ ಗೊತ್ತಿಲ್ಲ. ಅವರು ಬನ್ನೇರುಘಟ್ಟ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರಿಗೆ ಚಂಪಕಾಧಾಮ, ಶಾರದಮ್ಮ ಹಾಗೂ ಚಿಲಕಮ್ಮ ಪರಿಚಯಸ್ಥರು ಎಂದರೆ ಸರಿಯಲ್ಲ. ಸದರಿ ನನ್ನ ತಂದೆ ಮತ್ತು ಸದರಿ ಮೂರು ಜನ ಮುನಿವೆಂಕಟಪ್ಪ ನವರ ಆಸ್ತಿಗಳು ಲಪಟಾಯಿಸಬೇಕೆಂದು ಹೊಂಚು ಹಾಕಿದ್ದರು ಎಂದರೆ ಸರಿಯಲ್ಲ. ಆಗ ಮುನಿವೆಂಕಟಪ್ಪ ನವರು ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸಾಕ್ಷಿ ಕೊಟ್ಟಿರಬಹುದು ಏನೋ ನನಗೆ ಗೊತ್ತಿಲ್ಲ. ನಂತರ, ಸದರಿ ಅರ್ಜಿಯನ್ನು ಜಿಲ್ಲಾಧಿಕಾರಿಗಳು ತಹಶೀಲ್ದಾರ್ ರವರಿಗೆ ವರ್ಗಾಯಿಸಿದು, ಅದರಂತೆ ತಹಶೀಲ್ದಾರ್ ರವರು ಪ್ರಕರಣ ಸಂಖ್ಯೆ: 90/1977-78 ಎಂದು ದಾಖಲಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಪ್ರಕರಣದಲ್ಲಿ ಮುನಿವೆಂಕಟಪ್ಪ ನವರಿಗೆ ಸದರಿ ಆಸ್ತಿಗಳು ಬಿಟ್ಟುಕೊಡುವಂತೆ ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ನನ್ನ ತಂದೆ ಹಾಗೂ ಇತರರು ಚಿಲಕಮ್ಮನವರ ಮುಖಾಂತರ ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ.ಸಂಖ್ಯೆ:2022/1979 ಎಂದು ಮೇಲ್ಮನವಿ ಸಲ್ಲಿಸಿರುತ್ತಾರೆಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಸದರಿ ಪ್ರಕರಣ ಚಿಲಕಮ್ಮನ ಪರ ಆದೇಶವಾಗಿದೆ ಎಂದರೆ ಸರಿಯಲ್ಲ. ನಂತರ ಮುನಿವೆಂಕಟಪ್ಪ ಸದರಿ ಆದೇಶದ ವಿರುದ್ಧ ಡಬ್ಲ್ಯೂ.ಎ.ಸಂಖ್ಯೆ: 777/1981 ಎಂದು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ಮೇಲ್ಮನವಿಯಲ್ಲಿ ಮುನಿವೆಂಕಟಪ್ಪ ಸದರಿ ಆಸ್ತಿಗಳಿಗೆ ಮಾಲೀಕ ಎಂದು ತೀರ್ಮಾನ ಮಾಡಿ ಹಾಗೂ ಅಡಮಾನ ವಜಾ ಮಾಡಿ ಸ್ವಾಧೀನವನ್ನು ಮುನಿವೆಂಕಟಪ್ಪನವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆದೇಶದಂತೆ ಎಂ.ಆರ್. 34/1983-84 ಎಂದು ಆಗಿರುತ್ತದೆ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಯನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ಇರಬಹುದು.

**(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ, ಕೇಳಲಾಗಿ ಸಮಯ ನೀಡಿ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು,**
**ಆನೇಕಲ್.**